ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಮೈದಾನ ಭಾಗದಲ್ಲಿ ಏನಾಗಿದೆಯೆಂಬ ಬಗ್ಗೆ ಹೇಳಿದರು. ಮಲೆನಾಡಿನ ಭಾಗದಲ್ಲಿರತಕ್ಕ ಜನರಿಗೂ ಕುಡಿಯುವ ನೀರಿನ ಬವಣೆ ಇದೆಯೆಂಬುದು ಮೊಟ್ಟಮೊದಲನೆ ವಾಕ್ಯವಾಗಿದೆ. ಅಲ್ಲಿ ಮಳೆಗಾಲದಲ್ಲಿ ಹೆಚ್ಚು ನೀರು ಇರುತ್ತದೆ, ಬಾವಿಗಳಲ್ಲಿ ನೀರು ತುಂಬಿರುತ್ತದೆ. ಮಾನ್ಯ ಮಂತ್ರಿಗಳೇ ಹೇಳಿರುವ ಹಾಗೆ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮಲೆನಾಡು ಭಾಗದಲ್ಲಿ ನೀರು ಅನೇಕ ಬಾವಿಗಳಲ್ಲಿ ಬತ್ತಿ ಹೋಗಿರುತ್ತದೆ. ಈ ವಿಷಯು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಮೀಟಿಂಗ್‌ನಲ್ಲಿಯೂ ಚರ್ಚೆಯಾಗಿದೆ. ಆದರೆ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರು ಅನೇಕ ಜನ ಕೊಟ್ಟ ಹಣ ಸಹಾಯದಿಂದ ಕೆಲವು ಕಡೆಗಳಲ್ಲಿ ಹೊಸದಾಗಿ ಬಾವಿಗಳನ್ನು ತೆಗೆದಿದ್ದಾರೆ. ಆದರೆ ಆ ಹೊಸ ಬಾವಿಗಳಲ್ಲಿ ಒಂದು ತೊಟ್ಟು ನೀರು ಇಲ್ಲ. ಇನ್ನೂ ಅನೇಕ ಕಡೆಗಳಲ್ಲಿ ಹೊಸದಾಗಿ ಬಾವಿಗಳನ್ನು ತೆಗೆಯಬೇಕು. ಅವರು ಹಣ ಖರ್ಚುಮಾಡಿದರೂ ಆಲ್ಲಿ ನೀರು ಸಿಗುತ್ತಾ ಇಲ್ಲ. ಆ ದೃಷ್ಟಿಯಿಂದ ಮಲೆನಾಡು ಭಾಗಗಳಿಗೆ ರಿಗ್ ಯಂತ್ರಗಳನ್ನು ಉಪಯೋಗಿಸಿ ಬಾವಿಗಳನ್ನು ಬಹಳ ಆಳವಾಗಿ ತೆಗೆಯ ಬೇಕಾಗಿದೆ. ಆದ್ದರಿಂದ ಈಗಲಾದರೂ ಬೇರೆ ಒಂದು ಯೋಜನೆಯನ್ನು ಹಾಕಿ ಮಲೆನಾಡು ಭಾಗವಾಗಿರತಕ್ಕ ಜಿಲ್ಲೆ ಳಲ್ಲಿ ಜನರಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸುವ ದೃಷ್ಟಿಯಿಂದ ಒಂದು ವ್ಯಾಪಕವಾದ ಯೋಜನೆಯನ್ನು ಸರ್ಕಾರದವರು ಹಾಕಿಕೊಂಡು ಅಲ್ಲಿರತಕ್ಕ ಜನರಿಗೆ ಇರತಕ್ಕ ಈ ತೊಂದರೆಯನ್ನು ಬೇಗನೆ ನೀಗಿಸುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ಸದಸ್ಯರ ಸಲಹೆಯನ್ನು ವಿಚಾರ ಮಾಡೋಣ. ಈಗಾಗಲೇ ವ್ಯಾಪಕವಾದ ಕಾರ್ಯವನ್ನು ಮಾಡಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಯಾವ ಏರಿಯಾಗಳಲ್ಲಿ ನೀರು ಇಲ್ಲ., ಯಾವ್ಯಾವ ಏರಿಯಾಗಳಲ್ಲಿ ನೀರು ಬೇಕೆಂಬ ಬಗ್ಗೆ ಸರ್ವೆ ಮಾಡಿದ್ದಾರೆ. ಒಂದು ರಿಗ್‌ನಿಂದ ಕೆಲಸವಾಗುವುದಿಲ್ಲವೆಂದರೆ ಇನ್ನೊಂದು ರಿಗ್ ಯಂತ್ರವನ್ನು ಕಳುಹಿಸಲಾಗುತ್ತದೆ. ಎಲ್ಲಿ ಡಿಫಿಕ್ಟ್ ಏರಿಯ ಇದೆಯೆಂಬುದನ್ನೂ ಸಹ ಸರ್ವೆ ಮಾಡಿದ್ದಾರೆ. ಅಲ್ಲಿ ಇನ್ನೂ ಕೆಲವಾರು ಕೆಲಸಗಳು ಆಗಬೇಕಾಗಿವೆ. ಆದರೆ ಈಗಿನ ಹಣಕಾಸಿನ ಚೌಕಟ್ಟಿನಲ್ಲಿ ಎಷ್ಟು ಸಾಧ್ಯ ಅಷ್ಟು ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ. ಮಲೆನಾಡಿನಲ್ಲಿ ಬೇಸಿಗೆ ಕಾಲದಲ್ಲಿ ನೀರಿನ ಅಭಾವ ಹೆಚ್ಚಿಗೆ ಇರುತ್ತದೆಂಬುದು ಸರ್ಕಾರದ ಗಮನಕ್ಕೂ ಬಂದಿದೆ. ಅಂತಹ ಕೆಲವು ಪ್ರದೇಶಗಳಲ್ಲಿ ಬಾವಿಗಳನ್ನು ಎಷ್ಟು ಡೀಪನ್ ಮಾಡಿದರೂ ನೀರು ಬರುವುದಿಲ್ಲವೆಂಬುದು ಸರ್ಕಾರಕ್ಕೆ ಗೊತ್ತಿದೆ. ಆದ್ದರಿಂದ ಅಂತಹ ಕಡೆಗಳಲ್ಲಿ ಬೋರ್‌ವೆಲ್ ಸ್ಕೀಂ ಬಹಳ ಉತ್ತಮ. ಅದನ್ನು ಉಪಯೋಗಿಸಿ ಅದಷ್ಟು ಜಾಗ್ರತೆಯಾಗಿ ಈ ಕೆಲಸವನ್ನು ಮಾಡಿಕೊಡಲು ಪ್ರಯತ್ನಮಾಡುತ್ತೆವೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನನಗೆ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಾ ಮೂಲಕ ಒಂದು ವಿಚಾರ ಗೊತ್ತಾಯಿತು. ಒಂದು ಗ್ರಾಮಕ್ಕೆ ಒಂದು ಸರ್ಕಾರದ ಬಾವಿಯನ್ನು ಕೊಟ್ಟಮೇಲೆ ಮತ್ತೊಂದು ಬಾವಿಯನ್ನು ಕೊಡುವುದಕ್ಕಾಗುವುದಿಲ್ಲವೆಂಬುದಾಗಿ ಸರ್ಕಾರದ ಆದೇಶವಿದೆ ಎಂದು ಯಾವ ಗ್ರಾಮದಲ್ಲೇ ಬಾವಿಯನ್ನು ತೋಡಿದಲ್ಲೇ ನೀರು ಸಿಗುತ್ತದೆಯೆಂಬುದನ್ನು ಹೇಗೆ ನಿರ್ಧರಮಾಡುತ್ತಾರೆ ? ಆ ರೀತಿ ನಿರ್ಧರಮಾಡಿ ಒಂದು ಬಾವಿಯನ್ನು ಕೊಟ್ಟರೂ ಆಲ್ಲಿನ ಜನಸಂಖ್ಯೆ ಒಂದುವೇಳೆ ಹೆಚ್ಚಾಗಿದ್ದರೆ, ಅಲ್ಲಿ ಕೊಟ್ಟಿರುವ ಬಾವಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದರೆ, ಅಂತಹಾ ಕಡೆಗಳಲ್ಲಿ ಇನ್ನೊಂದು ಸರ್ಕಾರದ ಬಾವಿಯನ್ನು ಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಒಂದೂ ಬಾವಿ ಇಲ್ಲದೆ ಇರುವ ಗ್ರಾಮಗಳಲ್ಲಿ ಈ ಪ್ರಶ್ನೆ ಮಾದಲು ಬಗೆಹರಿಯಲ್ಲಿ. ಎಲ್ಲಿ ನೀರು ಇಲ್ಲವೊ ಅಂತಹ ಕಡೆಗಳಿಗೆ ಮೊದಲು ಕೊಡೋಣ. ಜನಸಂಖ್ಯೆ ಜಾಸ್ತಿ ಇದ್ದು ಕೊಟ್ಟಿರುವ ಬಾವಿಯಲ್ಲಿ ಸಾಕಷ್ಟು ನೀರು ಇಲ್ಲದಿದ್ದರೆ ಅಂತಹೆ ಕಡೆಗಳಲ್ಲಿ ಇನ್ನೂ ಒಂದು ಬಾವಿಯನ್ನ ಕೊಡುವುದಕ್ಕೇನೂ ಅಡ್ಡಿ ಇಲ್ಲ. ಅಂತಹ ಅವಶ್ಯಕತೆ ಕಂಡುಬಂದರೆ ಖಂಡಿತವಾಗಿ ಕೊಡೋಣ. ಅದನ್ನೂ ಮಾಡಬಹುದು. ಕೆಲವು ಕಡೆಗಳಲ್ಲಿ ಒಂದಕ್ಕಿಂತ ಎರಡು ಬೋರ್‌ವೆಲ್ಸ್‌ಗಳನ್ನು ಕೊಟ್ಟಿದೆ. ಮಲೆನಾಡಿನಲ್ಲಿ ಜನಸಂಖ್ಯೆಯ ಆಧಾರವ ಮೇಲೆಯೇ ಬಾವಿಗಳನ್ನು ಕೊಡುವ ಪ್ರಶ್ನೆಯನ್ನು ವಿಚಾರ ಮಾಡೋಣ. ಕೆಲವು ಹಳ್ಳಿಗಳಲ್ಲಿ ಒಂದೊಂದೇ ಸಾಕಾಗಬಹುದು. ಏಕೆಂದರೆ ಒಂದೊಂದು ಏರಿಯಾದಲ್ಲಿ ಪಾಪ್ಯುಲೇಷನ್ ಕಡಿಮೆ ಇರುತ್ತದೆ. ಸೊರಬ ತಾಲ್ಲೂಕ್ ಸೆಮಿ-ಮಲೆನಾಡು ಆಗಿರುವುದರಿಂದ ಅಲ್ಲಿ ಮಾತ್ರ ಜನಸಂಖ್ಯೆ ಜಾಸ್ತಿ ಇರಬಹುದು. ಏನೇ ಆಗಲಿ each individual case will be examined on its own merits and if found necessary, we will consider.

(ii) re : Scaercity of drinking water in Chitradurga District

SRI. V. MADIAPPAH (Challakere).—Sir, I call the attention of the Minister for Health to the acute scarcity of drinking water in Chitradurga District.

SRI H SIDDAVAEERAPPA(Minister for Health).—Madam I make the following Statement.

Chitradurga District consists of 1252 inhabitated villages. All the villages have been provided with drinking water wells. In addition, 75 National Rural Water Supply Schemes have been sanctioned and 55 schemes have been completed. Under UNICEF assisted programme, bore wells have been sanctioned to 255 villages in Hiriyur and Hosadurga taluks of which 231 have been completed.

During the present summer months, scarcity of drinking water has been acutely felt in about 114 villages and in these villages, it is found necessary to provide bore wells. Talukwise details are indicated in the 4 Rigs are functioning in the District, and they have drilled 39 bore wells of which 9 have failed. The Rigs are now working in Holakere, Jagalur, Challakere and Davangere taluks. A sum of Rs. 16.67 lakhs out of the budget provision of Rs. 100 lakhs under bore wells programme for the current year has been placed at the disposal of the Chief Engineer, MI & PHE, South Zone, for being utilised in the first 4 Months i.e., April-July 1974,

1.	Jagalur	...	17
2.	Molakolmuru	...	3
3	Challakere	...	12
4.	Chitradurga	...	27
5.	Hosadurga	...	7
6.	Holalkere	...	24
7.	Davangere	...	17
8.	Hiriyur	...	7
			114

In about another 100 villages, where the water level in the wells has gone down, the Deputy Commissioner has taken action to get them deepended further through the Village Panchayats/Taluk Development Boards The Taluk Development Boards of Davangere, Challakere and Holakere have spent Rs. 25,096/-, Rs. 9035/- and Rs. 2100/- respectively in this respect. The question of providing grant to the Deputy Commissioner to meet the expenditure on deepending works out of the budget provision of Rs. 185/-lakhs under '208-Relief on account of National Calamities' is being examined in the public Works Department (Scarcity Relief).

In the scarcity affected villages people are using water from the irrigation wells. The existing drinking water wells have also been desilted.

Even efforts are being made to provide relief to the people in the affected Villages.

ಶ್ರೀ ವಿ, ವಂಸಿಯಪ್ಪ.—ಮಾನ್ಯ ಅಧ್ಯಕ್ಷರೆ : ನ್ಯಾಷನಲ್ ರೂರಲ್‌ವಾಟರ್ ಸಪ್ಲೆ ಸ್ಕೀಮಿನಲ್ಲಿ ಸುಮಾರು ೬೫ ಸ್ಕೀಮಿನಲ್ಲಿ ೫೫ ಸ್ಕೀಮುಗಳ ಕೆಲಸ ಮುಗಿದಿದೆ ಎಂದು ಹೇಳಿದರು, ಆದರೆ ಇವುಗಳಲ್ಲಿ ಅನೇಕ ಕಡೆ ಬಾವಿಗಳನ್ನು ತೆಗೆದಿದ್ದರೂ ನೀರು ಬೀಳದೆ ಅಲ್ಲಿ ಇವು ಫೈಲಾಗಿವೆ. ಮಾನ್ಯ ಸಚಿವರಿಗೆ ಗೊತ್ತಿರುವಂತೆ ಮೊನ್ನೆ ರಾತ್ರಿ ಅವರು ಹಿರಿಯೂರಲ್ಲಿ ತಂಗಿದ್ದಾಗ ಅದೇ ತಾಲ್ಲೂಕಿನ ಅಲೂರು ಗ್ರಾಮದಲ್ಲಿ ತೆಗೆದ ಬಾವಿಯಲ್ಲಿ ನೀರು ಬೀಳಲಿಲ್ಲ ಎಂದು ಗೊತ್ತಾಗಿದೆ. ಅದೇ ರೀತಿ ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳಲ್ಲಿ ಕೂಡ ಅನೇಕ ಬಾವಿಗಳು ಫೈಲಾಗಿವೆ. ಈ ವಿಚಾರ ಮಾನ್ಯ ಸಚಿವರ ಗಮನಕ್ಕೂ ಬಂದಿರಬೇಕು. ಅವರೆ ಸಮ್ಮ ಜಿಲ್ಲೆಗೆ ನಾಲ್ಕು ರಿಗ್ಸ್‌ಗಳನ್ನು ಕೊಟ್ಟಿದ್ದೀವೆಂದು ಹೇಳಿದ್ದಾರೆ. ಬಹಳ ಸಂತೋಷ ಆದಾಗ್ಯೂ ಆ ರಿಗ್ಸ್ ಸಾಕಷ್ಟು ಪ್ರಗತಿಯಾಗಿಲ್ಲ. ಕುಡಿಯುವ ನೀರಿಗೆಷ್ಟು ತೊಂದರೆ ಇದೆಯೋ ಆ ದಾಮಟದಲ್ಲಿ ಅಲ್ಲಿ ಬಾವಿಗಳನ್ನು ತೋಡಿಸತಕ್ಕ ಕೆಲಸದ ಪ್ರಗತಿ ಸಾಗಿಲ್ಲ. ತಮ್ಮ ಸ್ಟೇಟ್‌ಮೆಂಟಿನಲ್ಲಿ ತಿಳಿಸಿದಂತೆ ೩೯ ಬೋರ್‌ವೆಲ್ಲುಗಳನ್ನು ಅಷ್ಟುಕಾಲ ೪ ರಿಗ್ಸ್ ಇಟ್ಟುಕೊಂಡು ಮಾಡುವುದೆಂದರೆ ಅದು ಹಾಸ್ಯಾಸ್ಪದ. ಸಾಕಷ್ಟು ಪ್ರಗತಿ ಸಾಗಿಲ್ಲ.

ಇನ್ನು ಈ ಜಿಲ್ಲೆಯಲ್ಲಿ ಬಾವಿಗಳನ್ನು ಆಳಪಡಿಸುವುದಕ್ಕೆ ಜಿಲ್ಲಾಧಿಕಾರಿಗಳು ಜನರಲ್ ಆಡಳಿತವನ್ನು ಕೊಟ್ಟಿದ್ದರೂ ತಾಲ್ಲೂಕುಗಳಲ್ಲಿ ''೩೨–ಆರ್ ಡಿ ನಲ್ಲಿ'' ಹಣವಿಲ್ಲದೆ ಅನೇಕ ತಾಲ್ಲೂಕುಗಳಲ್ಲಿ ಈ ಕೆಲಸ ಮುಂದುವರಿಯದೆ ಹಾಗೇ ಸ್ಥಗಿತವಾಗಿದೆ ''೩೨ ಆರ್.ಡಿ.ಗೆ'' ಹಣವನ್ನು ರೀಇಂಬರ್ಸ್ ಮಾಡುವುದಕ್ಕೆ ಜಿಲ್ಲಾಧಿಕಾರಿಗಳು ಹಣವನ್ನು ಕೊಡಲ್ಲಿಲ್ಲ. ಕೇವಲ ೩ ತಾಲ್ಲೂಕುಗಳವರು ಅಂದರೆ ಇಲ್ಲಿ ಕೊಟ್ಟಿರುವಂತೆ ದಾವಣಗೆರೆ, ಚಳ್ಳಕೆರೆ ಮತ್ತು ಹೊಳಲ್ಕೆರೆ ತಾಲ್ಲೂಕುಗಳವರು ಮಾತ್ರ ಈ ಕಾರ್ಯವನ್ನು ಕೈಗೊಂಡಿದ್ದಾರೆ. ಉಳಿದ ತಾಲ್ಲೂಕುಗಳಿಗೆ ಇದನ್ನು ಮುಂದುವರಿಸುವುದಕ್ಕೆ ದುಡ್ಡಿಲ್ಲವೆ ಕೈಬಿಟ್ಟಿದಾರೆ. ಬೇಸಿಗೆಯಲ್ಲಿ ನೀರಿನ ತೀವ್ರ ಅಭಾವವಿರಿತಕ್ಕ ೧೨ ಗ್ರಾಮಗಳಲ್ಲಿ'' ಎಂದು ಹೇಳಿ ಚಳ್ಳಕೆರೆ ತಾಲ್ಲೂಕಿನಲ್ಲಿ ಇಂಥ ತೊಂದರೆ ಇದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆಗ್ರಾಮಗಳು ಯಾವು ತಿಳಿಸಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಕೇಳುತ್ತಿರುವ ಆ ಗ್ರಾಮಗಳ ಹೆಸರು ಸಧ್ಯಕ್ಕೆ ನನ್ನಲ್ಲಿಲ್ಲ. ಅನಂತರ ಅವರಿಗೆ ಅವುಗಳನ್ನು ತಿಳಿಸಿಕೊಡುತ್ತೇನೆ.

ಮಾನ್ಯ ಸದಸ್ಯರು ಅಲ್ಲ ರೀಇಂಬರ್ಸ್ ಮಾಡುವುದಕ್ಕೆ ಹಣವೇ ಇರಲ್ಲಿಲ್ಲ ಎಂದು ಹೇಳಿದ್ದು ನಿಜವಾದಂಶ. ಆದರೆ ಇತ್ತೀಚೆಗೆ ನಮ್ಮ ಸೆಕ್ರೆಟರಿಗಳು ಆ ಪ್ರಾಂತದಲ್ಲಿ ಸುತ್ತಾಡಿ ನೋಡಿಕೊಂಡು ಬಂದಮೇಲೆ ಅಲ್ಲಿಗೆ ಒಂದು ಲಕ್ಷ ರೂಪಾಯಿಗಳನ್ನು ಅಲ್ಲಿನ ಒಂದೊಂದು ಡಿವಿಜನ್ನಿಗೂ ಕೊಡಲಾಗಿದೆ. ಆರ್. ಡಿ. ಬಾಬಿನಲ್ಲಿ ಎಷ್ಟು ಕಾಣ ಬೇಕೊ ಇದಕ್ಕೆ ಅಷ್ಟನ್ನೂ ಪ್ರೊವೈಡ್‌ಮಾಡುವುದಾಗಿ ನಾನು ಅವರಿಗೆ ತಿಳಿಸಿದ್ದೇನೆ.

ಇನ್ನು ಅಲ್ಲಿ ರಿಗ್ ಸಾಕಷ್ಟು ತ್ವರಿತವಾಗಿ ಕೆಲಸ ಮಾಡಲಿಲ್ಲ ಎಂಬ ಮಾತನ್ನು ನಾನು ಕೂಡ ಒಪ್ಪುತ್ತೇನೆ. ಈ ವಿಚಾರದಲ್ಲಾಗಲೇ ಅಲ್ಲಿನ ಇಂಜಿನಿಯರಿಗೆ ತೀವ್ರವಾವ ತಾಕೀತನ್ನು ಕೊಡಲಾಗಿದೆ. ಅಲ್ಲಿ ನಾವು ಇದರ ಬಗ್ಗೆ ಎಷ್ಟು ಹಣವನ್ನು ಇನ್‌ವೆಸ್ಟ್ ಮಾಡಿದ್ದೆವೊ ಅದರ ದಾಮಾರ ಪಾಕಾಷ ನಮಗೆ ಅಲ್ಲಿ ಒಂದು ನೂರು ಬಾವಿಗಳಾದರೂ ಆಗಬೇಕು. ಇಲ್ಲವಾದರೆ ನನಗೆ ಬಹಳ ಲುಕ್ಸಾನಾಗುತ್ತದೆ. ಆದರೆ ಅವರು ಅಲ್ಲಿ ಅದಕ್ಕೆ ಪೈಂಟನೆನ್ಸ್, ಸೆಕ್ಷನ್ ಇಲ್ಲ ಎಂದು ಹೇಳಿ ಒಂದು ಸಾಮಾನು ಮುರಿದರೆ ಅವರು ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆಂದು ತಿಳಿಸಿದಕ್ಕೆ ಅಲ್ಲಿ ಅದನ್ನೆಲ್ಲಾ ಸರಿಪಡಿಸಲಾಗಿದೆ. ಅದರ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಂಡಿದೆ. ನೆನ್ನೆ ಹಿರಿಯರಲ್ಲಿ ನನಗೆ ಬಾವಿ ಫೈಲಾವ ಬಗ್ಗೆ ಕೊಟ್ಟ ತೀರ್ಮಾನವನ್ನು ನಾನು ಚೀಫ್ ಇಂಜಿನಿಯರ್ ಕಛೇರಿಗೆ ಕಳುಹಿಸಿಕೊಟ್ಟಿದ್ದೇನೆ, ಅದು ಒಂದು ದೊಡ್ಡಗ್ರಾಮ ಅದುದರಿಂದ ಕೂಡಲೆ ನೀರನ್ನು ಒದಗಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದ್ದೇನೆ.

2-00 P.M.

re :—Clash between Harilans and CastHindus in Siddapur locality on Ist Mvy 1974.

SRI M.B. RAMASWAMY (Anekal).—Madam, I call the the attention of the Chief Minister to the clash between the Harijans and Caste Hindus in Siddapur locality (Lalbag, Bangalore) on 1st May 1974.